## ಲೈಫಿಗೆ ತ್ಯಾಪೆ!

'ಲೈಫು ಇಷ್ಟೇನೆ' ಚಿತ್ರದ ನಿರ್ದೇಶಕ ಪವನ್ ಕುಮಾರ್ ಅವರಿಗೆ 'ಸಿನಿಮಾ ಇಷ್ಟೇನೆ' ಎಂದು ಅನ್ನಿಸಿದಂತಿದೆ. ತಮ್ಮ ಚಿತ್ರಕ್ಕೆ ತೊಡರುಗಾಲಾಗಿ ಪರಿಣಮಿಸಿರುವ ಪೈರಸಿ ಅವರನ್ನು ಹಣ್ಣಾಗಿಸಿದೆ. ಇಷ್ಟು ಮಾತ್ರಕ್ಕೆ ಅವರು ಕೈಕಟ್ಟಿ ಕೂತಿಲ್ಲ. ಚಿತ್ರದ ಕ್ಲೈಮ್ಯಾಕ್ಸ್ ಅನ್ನು ಮತ್ತಷ್ಟು ಹಿಗ್ಗಿಸುವ ಮೂಲಕ ಪ್ರೇಕ್ಷಕರನ್ನು ಮತ್ತೆ ಚಿತ್ರಮಂದಿರಕ್ಕೆ ಆಹ್ವಾನಿಸುವ ಪ್ರಯತ್ನ ಅವರದ್ದು.

ಪವನ್ ಇದೀಗ ಒಟ್ಟು ಹನ್ನೆರಡು ನಿಮಿಷಗಳ ದೃಶ್ಯಗಳನ್ನು ಚಿತ್ರಕ್ಕೆ ಕೊಲಾಜ್ ಮಾಡಿದ್ದಾರೆ. ಈ ದೃಶ್ಯಗಳಲ್ಲಿ ನಟಿ ಸೋನು ಹಾಗೂ ಪವನ್ ಖುದ್ದಾಗಿ ತೆರೆಯ ಮೇಲೆ ಕಾಣಿಸಿಕೊಂಡಿದ್ದಾರೆ. ಸಿಕ್ಕಾಪಟ್ಟೆ ತಮಾಷೆಯಾಗಿರುವ ಈ ದೃಶ್ಯಗಳು ಪ್ರೇಕ್ಷಕರನ್ನು ರಂಜಿಸುವುದರ ಜೊತೆಗೆ, ಚಿತ್ರಕ್ಕೆ ಹೊಸ ಆಯಾಮ ನೀಡುವ ನಿರೀಕ್ಷೆ ಅವರದ್ದು. ಅಂದ ಹಾಗೆ, ಈ ಮೊದಲೇ ಸೆನ್ಸಾರ್ ಆಗಿದ್ದ ಈ ದೃಶ್ಯಗಳನ್ನು ಸಿನಿಮಾದ ಉದ್ದ ನಿಯಂತ್ರಿಸುವ ಉದ್ದೇಶದಿಂದ ಕತ್ತರಿಸಲಾಗಿತ್ತಂತೆ.





## ರಜನಿ ನಾಮದ ಬಲ!

'ಕಳ್ಳ ಮಳ್ಳ ಸುಳ್ಳ'ದಲ್ಲಿ ತಕ್ಕಮಟ್ಟಿಗೆ ಕಾಸು ಮಾಡಿಕೊಂಡಿರುವ ನಿರ್ಮಾಪಕ ಕೆ.ಮಂಜು ಈಗ 'ರಜನಿಕಾಂತ' ಹೆಸರಿನ ಚಿತ್ರ ಸೆಟ್ಟೇರಿಸಿದ್ದಾರೆ. ರಜನಿ ನಾಮಬಲದ ಈ ಚಿತ್ರದಲ್ಲಿ ಭಾರತೀಯ ಚಿತ್ರರಂಗದ ಸೂಪರ್ ಸ್ಟಾರ್ ರಜನಿಕಾಂತ್ ನಟಿಸುತ್ತಿಲ್ಲ. ಮಂಜು ನಾಯಕನಾಗಿ ಆರಿಸಿರುವುದು ದುನಿಯಾ ವಿಜಯ್ ಅವರನ್ನು.

ವಿಜಯ್‌ಗೆ ಖುಷಿಯಾಗಲಿಕ್ಕೆ ಕೆಲವು ವಿಷಯಗಳಿವೆ. ಮೊದಲನೆಯದು ರಜನಿಕಾಂತ ಹೆಸರಿನ ಚಿತ್ರದಲ್ಲಿ ನಟಿಸುತ್ತಿರುವುದು. ರಜನಿ ಅವರಿಗೆ ಸ್ಫೂರ್ತಿದಾಯಕ ನಟರಲ್ಲೊಬ್ಬರು. ಖುಷಿಗೆ ಎರಡನೇ ಕಾರಣ, ಈ ಚಿತ್ರದಲ್ಲವರು ದ್ವಿಪಾತ್ರದಲ್ಲಿ ನಟಿಸುತ್ತಿರುವುದು. ಕಲಾವಿದನಿಗೆ ಸವಾಲಾಗುವ ದ್ವಿಪಾತ್ರ ನಿರ್ವಹಣೆ, ನಟನೆಯ ಹಸಿವಿರುವ ಯಾವ ನಟನಿಗಾದರೂ ಖುಷಿ ತರುವುದು ಸಹಜವೇ.

ರಜನಿಯಾಗಿ ವಿಜಯ್ ಬಣ್ಣ ಹಚ್ಚಿಕೊಂಡಿದ್ದರೂ, ನಿರ್ಮಾಪಕ ಮಂಜು ನಾಯಕನ ಪಕ್ಕದಲ್ಲಿ ನಾಯಕಿಯನ್ನಿನ್ನೂ ನಿಲ್ಲಿಸಿಲ್ಲ. 'ಹೀರೋಯಿನ್ ಎಲ್ಲಿ?' ಎಂದು ಕೇಳಿದರೆ– 'ಐದಾರು ಹುಡುಗಿಯರು ಮನಸ್ಸಿನಲ್ಲಿದ್ದಾರೆ. ಸದ್ಯಕ್ಕೆ ಯಾವ ಹುಡುಗಿಯನ್ನೂ ಅಂತಿಮಗೊಳಿಸಿಲ್ಲ' ಎನ್ನುವುದು ಮಂಜು ರೆಡಿಮೇಡ್ ಉತ್ತರ.

## ಮತ್ತೆ ಪ್ರೀತಿಯ ಆಹ್ವಾನ...

'ಸಿನಿಮಾ ಸಹವಾಸ ಸಾಕು' ಎಂದು ಕಣ್ಣೀರುಗರೆದಿದ್ದ ನಿರ್ಮಾಪಕ, ನಿರ್ದೇಶಕ ರವೀಂದ್ರ ಮತ್ತೆ ಗಾಂಧಿನಗರದಲ್ಲಿ ಕಾಣಿಸಿಕೊಂಡಿದ್ದಾರೆ. ಮತ್ತದೇ, 'ಮತ್ತೆ ಬನ್ನಿ ಪ್ರೀತ್ಸೋಣ' ಎನ್ನುವ ಆಹ್ವಾನ.

ವಿಷಯ ಇಷ್ಟು: ಮೂರು ತಿಂಗಳ ಕೆಳಗೆ ರವೀಂದ್ರ 'ಐಯಾಮ್ ಸಾರಿ, ಮತ್ತೆ ಬನ್ನಿ ಪ್ರೀತ್ಸೋಣ' ಎನ್ನುವ ಚಿತ್ರ ತೆರೆ ಕಾಣಿಸಿದ್ದರು. ಪ್ರೇಕ್ಷಕರ ನಿರಾಸಕ್ತಿಯಿಂದ ಮಾನಸಿಕವಾಗಿ, ಆರ್ಥಿಕವಾಗಿ ಕುಸಿದಿದ್ದ ಅವರು ಮೂರೇ ದಿನಕ್ಕೆ ತಮ್ಮ ಚಿತ್ರವನ್ನು ಚಿತ್ರಮಂದಿರಗಳಿಂದ ವಾಪಸ್ ಪಡೆದಿದ್ದರು. ಆದರೆ, ಮಾಧ್ಯಮಗಳಲ್ಲಿ ಬಂದ ಉತ್ತಮ ವಿಮರ್ಶೆಗಳನ್ನು ಗಮನಿಸಿದ ಕೆಲವು ಸಹೃದಯರು ಈಗ ರವೀಂದ್ರರ ನೆರವಿಗೆ ನಿಂತಿದ್ದಾರೆ. ಅವರಲ್ಲಿ ಮುಂಚೂಣಿಯಲ್ಲಿ ನಿಂತಿರುವುದು ಅಂಬರೀಷ್.

'ರವೀಂದ್ರ ಒಳ್ಳೆಯ ಚಿತ್ರ ಮಾಡಿದ್ದಾರೆ. ಅದು ಪ್ರೇಕ್ಷಕರಿಗೆ ತಲುಪಲೇಬೇಕು' ಎನ್ನುವ ಕಾಳಜಿಯ ಮಾತು ಅಂಬಿ ಅವರದ್ದು. ಈ ಒತ್ತಾಸೆಯ ಮೇರೆಗೇ ಅ.21ರಿಂದ ರವೀಂದ್ರರ ಚಿತ್ರ ಮತ್ತೆ ತೆರೆ ಕಾಣುತ್ತಿದೆ. ಒಂದಷ್ಟು ಮಂದಿ ಸಹೃದಯರು ದುಡ್ಡು ಒಟ್ಟು ಮಾಡಿಕೊಂಡು ಥಿಯೇಟರ್ ಬಾಡಿಗೆ ಕಟ್ಟುತ್ತಿದ್ದಾರೆ. ಚಿತ್ರದ ಹೆಸರನ್ನು 'ಮತ್ತೆ ಬನ್ನಿ ಪ್ರೀತ್ಸೋಣ' ಎಂದು ರವೀಂದ್ರ ಮೊಟಕು ಮಾಡಿದ್ದಾರೆ. ಹಾಂ, 3.25 ಕೋಟಿ ರೂಪಾಯಿ ಬಜೆಟ್‌ನ ಈ ಚಿತ್ರ ನಿರ್ಮಾಪಕರಿಗೆ ಒಂದು ರೂಪಾಯಿಯನ್ನೂ ವಾಪಸ್ ತಂದುಕೊಟ್ಟಿಲ್ಲವಂತೆ.



■ ರಘು